ವಿಷಯ :- ಕುಂದಾಪುರ ತಾಲ್ಲೂಕಿನಲ್ಲಿ ಹಾಲು ಮಡ್ಡಿಯ ಕಳ್ಳಸಾಗಾಣಿಕೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1020 (272)

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) :- ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಕುಂದಾಪುರ ತಾಲ್ಲೂಕು ಶಂಕರನಾರಾಯಣ ಬೈಂದೂರು ಮತ್ತು ಕುಂದಾಪುರ ವಲಯಗಳಲ್ಲಿ ಸತತವಾಗಿ ಹಾಲುಮಡ್ಡಿ ಕಳ್ಳಸಾಗಾಣಿಕೆಯಾಗುತ್ತಿದ್ದು, ಅರಣ್ಯ ಇಲಾಖೆಯು ಇವನ್ನು ನಿಯಂತ್ರಿಸಲಾಗದಿದ್ದು ಅದನ್ನು ಏನೂ ಮಾಡದಿರಲು ಕಾರಣವೇನು?

2. ನಿಯಂತ್ರಿಸಲು ಸರ್ಕಾರದವರು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವರೇ?

3. ಇದರಿಂದ ಸರ್ಕಾರದ ಬೊಕ್ಕಸಕ್ಕಾಗುವ ಲಕ್ಷಾಂತರ ರೂಪಾಯಿ ನಷ್ಟವನ್ನು ಭರಿಸಲು ಇಲಾಖೆಯು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ ಸಚಿವರು) :-

1. ಹಾಲುಮಡ್ಡಿ ಕಳ್ಳ ಸಾಗಾಣಿಕೆಯಾಗುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಕಳ್ಳ ಸಾಗಾಣಿಕೆಯಾದ ಪ್ರಕರಣಗಳನ್ನು ಪತ್ತೆ ಹಚ್ಚಿ ತಕ್ಷಿರುಗಳನ್ನು ನೋಂದಾಯಿಸಿ ಅಪರಾಧಿಗಳಿಗೆ ದಂಡನೆ ವಿಧಿಸಲಾಗಿದೆ. ಒಟ್ಟು 12 ಪ್ರಕರಣಗಳಲ್ಲಿ 97-750 ಕೆ. ಜಿ. ಹಾಲುಮಡ್ಡಿಯನ್ನು ಅಮಾನತುಪಡಿಸಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಲಾಗಿದ್ದು ಅಪರಾಧಿಗಳಿಗೆ ಒಟ್ಟು ರೂ. 24,000-00 ದಂಡನೆ ವಿಧಿಸಲಾಗಿದೆ.

2. ಈ ಬಾಬ್ತು ಕಟ್ಟುನಿಟ್ಟಿನ ಕ್ರಮವನ್ನು ಕೈಗೊಳ್ಳುತ್ತಾ ಇದ್ದು ನಿಯಂತ್ರಣವನ್ನು ಸಾಧಿಸಲಾಗುತ್ತಿದೆ.

3. ಹಾಲುಮಡ್ಡಿ ಕಳ್ಳಸಾಗಾಣಿಕೆಯಾಗುವುದನ್ನು ತಡೆಗಟ್ಟಲು, ಅರಣ್ಯ ಸಂಚಾರಿ ದಳದ ಸಿಬ್ಬಂದಿ ವರ್ಗದವರು ಮತ್ತು ವಲಯಕ್ಕೆ ಸಂಬಂಧಪಟ್ಟ ಕಾರ್ಯ ನಿರ್ವಾಹಕ ಸಿಬ್ಬಂದಿಯವರು ಗಸ್ತು ತಿರುಗುತ್ತಿದ್ದಾರೆ. ಅಲ್ಲದೆ ಇಲಾಖೆಗೆ ಒದಗಿಸಿರುವ ಸಿಸ್ತಂತು ಮುಖಾಂತರ ಕ್ಷಿಪ್ರ ಕಾರ್ಯಾಚರಣೆ ಕೈಗೊಳ್ಳಲಾಗುತ್ತದೆ. ಅಲ್ಲದೆ ಹಾಲುಮಡ್ಡಿಕಳ್ಳ ಸಾಗಾಣಿಕೆಯನ್ನು ತಡೆಗಟ್ಟಲು ಜಾಗರೂಕರಾಗಿರಲು ಮತ್ತು ರಾತ್ರಿ ಗಸ್ತು ಬಿಗಿಗೊಳಿಸುವಂತೆ ಸಿಬ್ಬಂದಿಗಳಿಗೆ ಸೂಕ್ತ ನಿರ್ದೇಶನ ನೀಡಲಾಗಿರುತ್ತದೆ.